ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ:https://kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಸಂಖ್ಯೆ: ಕವಿಪ್ರನಿನಿ/ಎಸ್‌ಎ3/1598/2006-07** **ದಿನಾಂಕ:** 15 SEP 2021

## ಸುತ್ತೋಲೆ

**ವಿಷಯ:** ಅನ್ಯ ಇಲಾಖೆಗೆ ನಿಗಮದ ಸಿಬ್ಬಂದಿಯನ್ನು ನಿಯೋಜಿಸಿದ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ.

**ಉಲ್ಲೇಖ:** ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಎಸ್‌ಎ3/1598/2006-07 ದಿನಾಂಕ: 05.04.2014.

---

ಸರ್ಕಾರದ ವಿವಿಧ ಇಲಾಖೆಗಳಿಗೆ/ನಿಗಮ/ಮಂಡಳಿ/ಇತರೆ ಸಂಸ್ಥೆಗಳಿಗೆ ಅವಶ್ಯಕತೆಯ ಮೇರೆಗೆ ಕವಿಪ್ರನಿನಿಯಿಂದ ಸಿಬ್ಬಂದಿ ಸೇವೆಯನ್ನು ನಿಯೋಜನೆಯ ಮೇರೆಗೆ ನೀಡುತ್ತಿರುವುದು ತಿಳಿದ ವಿಷಯ ವಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ನಿಗಮದ ಅಧಿಕಾರಿಗಳ/ನೌಕರರ ನಿಯೋಜನಾ ಅವಧಿಯ ವಿಸ್ತರಣೆಗೆ ಪ್ರಸ್ತಾವನೆಯನ್ನು ವಿಳಂಬವಾಗಿ ಸಲ್ಲಿಸುತ್ತಿರುವುದು, ನಿಗಮದಿಂದ ನಿಯೋಜನಾ ವಿಸ್ತರಣೆ ಆದೇಶವಿಲ್ಲದೆಯೇ ನಿಯೋಜನೆಯನ್ನು ಮುಂದುವರೆಸುತ್ತಿರುವುದು ಮತ್ತು ನಿಯೋಜನಾ ಸಿಬ್ಬಂದಿಯ ಪಿಂಚಣಿ ಮತ್ತು ಉಪದಾನ ವಂತಿಗೆಗಳನ್ನು ನಿಗದಿತ ಅವಧಿಯೊಳಗಾಗಿ ಕವಿಪ್ರನಿನಿಗೆ ಪಾವತಿ ಸುತ್ತಿಲ್ಲದಿರುವ ಪ್ರಕರಣಗಳು ಹೆಚ್ಚಾಗುತ್ತಿರುತ್ತವೆ. ಇದರಿಂದಾಗಿ, ಸಿಬ್ಬಂದಿಯ ನಿಯೋಜನಾ ಅವಧಿಯ ವಿಸ್ತರಣೆ, ವಾರ್ಷಿಕ ವೇತನ ಬಡ್ತಿಗಳ ಬಿಡುಗಡೆ ಮತ್ತು ನಿಯೋಜನೆಯಿಂದ ಹಿಂತಿರುಗಿ ನಿವೃತ್ತಿ ಹೊಂದುವ ಸಿಬ್ಬಂದಿಯ ನಿವೃತ್ತಿ ಸೌಲಭ್ಯಗಳನ್ನು ಇತ್ಯರ್ಥಪಡಿಸಲು ಸಮಸ್ಯೆಗಳು ಉಂಟಾಗುತ್ತಿರುತ್ತವೆ. ಈ ಹಿನ್ನೆಲೆ ಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ತಪ್ಪದೇ ಅನುಸರಿಸಲು ಕೋರಿದೆ:

1. ಇನ್ನು ಮುಂದೆ ಕವಿಪ್ರನಿನಿಯ ಸಿಬ್ಬಂದಿ ಸೇವೆಯನ್ನು ನಿಯೋಜನೆಯ ಮೇರೆಗೆ ಪಡೆದು ಉಪಯೋಗಿಸುತ್ತಿರುವ ಸರ್ಕಾರದ ಇಲಾಖೆಗಳು/ನಿಗಮ/ಮಂಡಳಿ/ಇತರೆ ಸಂಸ್ಥೆಗಳು ಕವಿಪ್ರನಿನಿ ಸಿಬ್ಬಂದಿಯ ನಿಯೋಜನಾ ಅವಧಿಯು ಮುಕ್ತಾಯಗೊಳ್ಳುವ 3 ತಿಂಗಳು ಮೊದಲೇ, ಸದರಿ ಸಿಬ್ಬಂದಿಯ ಸೇವೆಯ ವಿಸ್ತರಣೆಯ ಅವಶ್ಯಕತೆಯಿದ್ದಲ್ಲಿ, ನಿಯೋಜನಾ ಅವಧಿಯ ವಿಸ್ತರಣೆಯ ಪ್ರಸ್ತಾವನೆಯನ್ನು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸುವುದು. ಕವಿಪ್ರನಿನಿ ಸಿಬ್ಬಂದಿ ಸೇವೆಯ ಅವಶ್ಯಕತೆಯಿಲ್ಲದಿದ್ದಲ್ಲಿ, ನಿಯೋಜನಾ ಅವಧಿಯು ಅಂತ್ಯಗೊಳ್ಳುವ ದಿನಾಂಕದಂದು ಸದರಿ ಅಧಿಕಾರಿಗಳನ್ನು/ನೌಕರರನ್ನು ತಪ್ಪದೇ ಕಾರ್ಯಮುಕ್ತಿಗೊಳಿಸುವುದು.

2. ಕವಿಪ್ರನಿನಿಯ ಸಿಬ್ಬಂದಿ ಸೇವೆಯನ್ನು ನಿಯೋಜನೆಯ ಮೇರೆಗೆ ಪಡೆದು ಉಪಯೋಗಿಸುತ್ತಿರುವ ಸರ್ಕಾರದ ಇಲಾಖೆಗಳು/ನಿಗಮ/ಮಂಡಳಿ/ಇತರೆ ಸಂಸ್ಥೆಗಳು ನಿಯೋಜನಾ ಸಿಬ್ಬಂದಿಯ ಪಿಂಚಣಿ ಮತ್ತು ಉಪದಾನ ವಂತಿಗೆಗಳನ್ನು ನಿಗದಿತ ಅವಧಿಯೊಳಗಾಗಿ ಕವಿಪ್ರನಿನಿಗೆ ಪಾವತಿಸುವುದು ಮತ್ತು ನಿಯೋಜನಾ ಅವಧಿಯ ವಿಸ್ತರಣೆಯ ಪ್ರಸ್ತಾವನೆಯನ್ನು ಸಲ್ಲಿಸುವ ಮೊದಲೇ, ಕವಿಪ್ರನಿನಿಗೆ ಪಾವತಿಸಬೇಕಿರುವ ನಿಯೋಜನಾ ಸಿಬ್ಬಂದಿಯ ಪಿಂಚಣಿ ಮತ್ತು ಉಪದಾನ ವಂತಿಗೆಗಳನ್ನು ಸಂಪೂರ್ಣವಾಗಿ ಪಾವತಿಸಲು ತಿಳಿಸಿದೆ. ತಪ್ಪಿದಲ್ಲಿ, ಕವಿಪ್ರನಿನಿಯ ಸಿಬ್ಬಂದಿಯ ನಿಯೋಜನಾ ಸೇವೆಯನ್ನು ತಕ್ಷಣವೇ ಹಿಂಪಡೆಯಲಾಗುವುದು.

3. ನಿಗಮದ ಆದೇಶ ಸಂಖ್ಯೆ; ಕವಿಪ್ರನಿನಿ/ಎಸ್‌ಎ3/1598/2006-07 ದಿನಾಂಕ; 05.04.2014 ರ ಅನ್ವಯ, ಕವಿಪ್ರನಿನಿಯ ಸಿಬ್ಬಂದಿಯನ್ನು ಅನ್ಯ ಇಲಾಖೆ/ಸಂಸ್ಥೆಯಲ್ಲಿ ನಿಯೋಜನೆಯ ಮೇರೆಗೆ ಸತತವಾಗಿ ಗರಿಷ್ಠ 5 ವರ್ಷಗಳ ಅವಧಿಗೆ ಮಾತ್ರ ಮುಂದುವರೆಸಲು ಅವಕಾಶವಿರುತ್ತದೆ. ಆದ್ದರಿಂದ, ಕವಿಪ್ರನಿನಿಯ ಮಾನವ ಸಂಪನ್ಮೂಲವನ್ನು ನಿಗಮದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಅನುವಾಗಲು ಗರಿಷ್ಟ ಅವಧಿಯ ನಿಯೋಜನೆಯ ಸೇವೆಯನ್ನು ಮುಕ್ತಾಯಗೊಳಸಿದ ಕವಿಪ್ರನಿನಿಯ ಸಿಬ್ಬಂದಿಯನ್ನು ಅನ್ಯ ಇಲಾಖೆಗಳು/ಸಂಸ್ಥೆಗಳು ಪುನ: ಮುಂದುವರೆಸಲು ಕೋರದೇ, ತಪ್ಪದೇ ಕಾರ್ಯಮುಕ್ತಿಗೊಳಿಸುವುದು.

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ.**

**ಪ್ರತಿಗಳು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ.
3. ಎಲ್ಲಾ ಮುಖ್ಯ ಇಂಜಿನಿಯರ್(ವಿ)/ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
4. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆಡಳಿತ ಮತ್ತು ಮಾ.ಸಂ.) ರವರ ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
5. ವ್ಯವಸ್ಥಾಪಕರು(ಸಿಬ್ಬಂದಿ-2), ನಿಗಮ ಕಾರ್ಯಾಲಯ, ಕವಿಪ್ರನಿನಿ ರವರು ಪ್ರತೀ ಮಾಹೆಯಲ್ಲಿ ಸಂಬಂಧಿಸಿದ ಎಲ್ಲಾ ಇಲಾಖೆಗಳು/ನಿಗಮ/ಮಂಡಳಿ/ಇತರೆ ಸಂಸ್ಥೆಗಳ ಮುಖ್ಯಸ್ಥರಿಗೆ ಪತ್ರದ ಮೂಲಕ ಲಗತ್ತಿಸಿ ಕಳುಹಿಸುವುದು ಮತ್ತು ಅನ್ಯ ಇಲಾಖೆ/ಸಂಸ್ಥೆಗಳಲ್ಲಿ ನಿಯೋಜನೆಯಲ್ಲಿರುವ ಎಲ್ಲಾ ಅಧಿಕಾರಿಗಳು/ನೌಕರರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ https://kptcl.karnataka.gov.in-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳು ಮಾಹಿತಿಗಾಗಿ:**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ. / ಎಸ್ಕಾಂ ಪ.ಜಾ. /ಪ. ಪಂ. ಅಧಿಕಾರಿಗಳ ಸಂಘ, ಬೆಂಗಳೂರು.